(ಮೇಲಿನ ಎಲ್ಲಾ 6 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ)

ಪ್ರಧಾನ ಮಂತ್ರಿಯವರ ಗ್ರಾಮೀಣಾಭಿವೃದ್ಧಿ ಯೋಜನೆ.

179(105)

ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮಾವರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಧಾನ ಮಂತ್ರಿ ಗ್ರಾಮೀಣ ಅಭಿವೃದ್ಧಿ ಯೋಜನೆಯ ರೂಪು ರೇಶೆಗಳೇನು? ರಾಜ್ಯದಲ್ಲಿ ಸದರಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ?

2. ಹಾಗಿದ್ದಲ್ಲಿ ಈ ಯೋಜನೆಯನ್ನು ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಜಾರಿಗೊಳಿಸಲಾಗಿದೆ? ಅದಕ್ಕಾಗಿ ಇದುವರೆಗೆ ವೆಚ್ಚ ಮಾಡಲಾಗಿರುವ ಮೊತ್ತವೆಷ್ಟು?

Sri M.Y.GHORPADE (Minister for Rural Development & Panchayat Raj):

1. 500 ಜನಸಂಖ್ಯೆ ಇರುವ ಎಲ್ಲಾ ಗ್ರಾಮಗಳಿಗೂ ರಸ್ತೆ ಸಂಪರ್ಕವನ್ನು 2007ರವರೆಗೆ (ಹತ್ತನೆ ಪಂಚವಾರ್ಷಿಕ ಯೋಜನೆ ಅಂತ್ಯದವರೆಗೂ) ಕಲ್ಪಿಸಲು ಪ್ರಧಾನ ಮಂತ್ರಿ ಗ್ರಾಮೀಣ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಯಲ್ಲಿ ಇರುತ್ತದೆ. ರಾಜ್ಯದಲ್ಲಿ ಸದರಿ ಯೋಜನೆಯನ್ನು ಶೀಘ್ರವಾಗಿ ಜಾರಿಗೊಳಿಸಲಾಗುತ್ತದೆ.

2. ಸದರಿ ಯೋಜನೆಯನ್ನು ಶೀಘ್ರದಲ್ಲಿಯೇ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಜಾರಿಗೊಳಿಸಲಾಗುತ್ತದೆ. ಮತ್ತು ಕೆಲಸಗಳು ಪ್ರಾರಂಭವಾಗಿರುವುದಿಲ್ಲವಾದ ಕಾರಣ ಇವರ ಮೇಲಾದ ವೆಚ್ಚದ ಪ್ರಶ್ನೆ ಉದ್ಭವಿಸುವುದಿಲ್ಲ.

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ತಡೆಗಟ್ಟುವ ಬಗ್ಗೆ.

180(29)

ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ

ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ಕಾಯಿಲೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ತಡೆಗಟ್ಟುವ ಬಗ್ಗೆ ತೆಗೆದುಕೊಂಡ ಕ್ರಮವೇನು?

ಆ. 1999-2000 ಮತ್ತು 2000-01ನೇ ಸಾಲಿನ ಇದುವರೆವಿಗೂ ಈ ಮಲೇರಿಯಾ ರೋಗ ತಡೆಗಟ್ಟುವ ಬಗ್ಗೆ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು? ಯಾವ ಯಾವ ಔಷಧಿಗಳನ್ನು ಖರೀದಿ ಮಾಡಲಾಗಿದೆ ಖರೀದಿ ಮಾಡಿದ ಬಗ್ಗೆ ವಿವರವನ್ನೊದಗಿಸುವುದು.

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ. ಬಂದಿದೆ.

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ಮಲೇರಿಯ ರೋಗಪೀಡಿತ ಪ್ರದೇಶಗಳಲ್ಲಿ ಜ್ವರ ಸಮೀಕ್ಷಾ ಕಾರ್ಯವನ್ನು ಚುರುಕುಗೊಳಿಸಿ ಜ್ವರಪೀಡಿತರಿಂದ ರಕ್ತಲೇಪನವನ್ನು ಸಂಗ್ರಹಿಸಿ ಶೀಘ್ರ ಪರೀಕ್ಷೆಗೆ ಮತ್ತು ತೀವ್ರ ಚಿಕಿತ್ಸೆಗೆ ವ್ಯವಸ್ಥೆ ನೀಡಲಾಗುತ್ತಿದೆ.

2) ಎಲ್ಲಾ ಖಚಿತ ಮಲೇರಿಯ ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ಮಾಡಲಾಗಿದೆ.

3) ಇದುವರೆಗೆ 2000ದ ಇಸವಿಯಲ್ಲಿ ಒಟ್ಟು 15,12,000 ಕ್ಲೋರೋಕ್ವಿನ್ ಗುಳಿಗೆಗಳು, 85,00 ಪ್ರೈಮಾಕ್ವಿನ್ ಗುಳಿಗೆಗಳು, 1000 ಸಲ್ಫಾಲಿನ್/ಪೈರಿಮೀಥಮೀನ್ ಗುಳಿಗೆಗಳನ್ನು ಚಿಕ್ಕಮಗಳೂರು ಜಿಲ್ಲೆಗೆ ಪೂರೈಸಲಾಗಿದೆ. ಅಲ್ಲದೆ, ಮಲೇರಿಯಾದಿಂದ ಸಾವು ಸಂಭವಿಸುವುದನ್ನು ತಡೆಗಟ್ಟಲು 2001ನೇ ಜನವರಿಯಲ್ಲಿ ''ಅರ್ಟೀಥರ್'' ಎಂಬ ವಿಶೇಷವಾದ ಚುಚ್ಚುಮದ್ದಿನ 180 ಅಂಪ್ಯೂಲುಗಳನ್ನು ಸಹ ಸರಬರಾಜು ಮಾಡಲಾಗಿದೆ.

4) ಪಂಚನಹಳ್ಳಿ, ಯಗಟಿ ಮತ್ತು ಸಿಂಗಟಗೆರೆ ವ್ಯಾಪ್ತಿಯಲ್ಲಿನ ಆಯ್ದ ಗ್ರಾಮಗಳಲ್ಲಿ 300 ಕೆ.ಜಿ. ಸಿಂಥಿಟಿಕ್ ಪೈರಿಥ್ರಾಯಿಡ್ ಎಂಬ ಕೀಟನಾಶಕ ಪುಡಿಯಿಂದ, ದಿನಾಂಕ 13.9.2000ದಿಂದ 21.9.2000ರವರೆಗೆ ವಿಶೇಷ ಸುತ್ತಿನ ಸಿಂಪಡನಾ ಕಾರ್ಯವನ್ನು ಕೈಗೊಳ್ಳಲಾಗಿದೆ.

5) ಕಡೂರು ತಾಲ್ಲೂಕಿನ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಫೆಬ್ರವರಿ 2001ನೇ ಸುತ್ತಿಗೆ ಸಿಂಪಡಿಸಲು 5000 ಕೆ.ಜಿ. ಮೆಲಾಧಿಯಾನ್ ಕೀಟನಾಶಕಪುಡಿಯನ್ನು ಸರಬರಾಜು ಮಾಡಲಾಗಿದೆ.

6) ರೋಗವಾಹಕ ಸೊಳ್ಳೆ ಉತ್ಪತ್ತಿಯ ತಾಣಗಳನ್ನು ನಿಯಂತ್ರಿಸಲು ಹಲವು ಸೂಕ್ತವಾದ ನೀರುನಿಂತ ಸ್ಥಳಗಳಲ್ಲಿ, ಗ್ಯಾಂಬುಸಿಯ ಮತ್ತು ಗಪ್ಪಿ ಎಂಬ ಲಾರ್ವಾಹಾರಿ ಮೀನುಗಳನ್ನು ಬಿಡಲಾಗಿದೆ.

7) ಮಲೇರಿಯ ರೋಗ ತಡೆಗಟ್ಟುವ ಬಗ್ಗೆ ವ್ಯಾಪಕವಾದ ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಆ. ಚಿಕ್ಕಮಗಳೂರು ಜಿಲ್ಲೆಗೆ 1999-2000 ಹಾಗೂ 2000-01ನೇ ಸಾಲಿನಲ್ಲಿ ಮಲೇರಿಯ ನಿಯಂತ್ರಣ ಕಾರ್ಯಕ್ರಮಕ್ಕೆ ಬಿಡುಗಡೆಯಾಗಿರುವ ಹಣ ಈ ಕೆಳಕಂಡಂತಿದೆ.

	1999-2000	2000-2001
ವೇತನಕ್ಕಾಗಿ:	ರೂ. 22,99,000.00	ರೂ. 22,24,000.00
ವೇತನೇತರ:	ರೂ. 1,68,000.00	ರೂ. 2,47,000.00
ಒಟ್ಟು :	ರೂ. 24,67,000.00	ರೂ. 24,71,000.00

ರಾಷ್ಟ್ರೀಯ ಮಲೇರಿಯ ವಿರೋಧ ಕಾರ್ಯಕ್ರಮದಡಿಯಲ್ಲಿ ಬೇಕಾದ ಮಲೇರಿಯ ನಿರೋಧಕ ಔಷಧಿಗಳನ್ನು ಕೇಂದ್ರ ಸರ್ಕಾರವು ತನ್ನ ಪಾಲಿನ ಅನುದಾನದ ರೂಪದಲ್ಲಿ ರಾಜ್ಯಕ್ಕೆ ಸರಬರಾಜು ಮಾಡುತ್ತದೆ. ಆದುದರಿಂದ ರಾಜ್ಯವು ಸಾಮಾನ್ಯವಾಗಿ ಈ ಔಷಧಿಗಳನ್ನು ಖರೀದಿಸುವುದಿಲ್ಲ. ಕೇಂದ್ರ ಸರ್ಕಾರದಿಂದ ಸರಬರಾಜಾದ ಔಷಧಿಗಳನ್ನು ಕ್ಲೋರೋಕ್ವಿನ್ ಮಾತ್ರೆಗಳು 15, 12,000

ಪೈ ಮಾಕ್ವಿನ್ ಮಾತ್ರೆಗಳು 85,000 ಸಲ್ಫಾಲಿನ್/ಪೈರಿಮೀಥಮೀನ್ ಮಾತ್ರೆಗಳು 1000 ಅಟ್ಟೀಥರ್ ಚುಚ್ಚುಮದ್ದುಗಳು 180 ಅಂಪ್ಯೂಲ್.

ಕಡೂರು ಆಸ್ಪತ್ರೆಯ ಕಾಮಗಾರಿಯ ಬಗ್ಗೆ.